# ಸಿವಿಲ್ ನ್ಯಾಯಾಧೀಶರ ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಬೇಲೂರು

<u>ಉಪಸ್ಥಿತರು</u>

ಶ್ರೀ ನಾಗೇಶ ಸಿ., ಬಿ.ಎ.ಎಲ್, ಎಲ್.ಎಲ್.ಬಿ.,
ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಬೇಲೂರು.

ದಿನಾಂಕ 16ನೇ ಮಾರ್ಚ್ ಮಾಹೆ 2020 ನೇ ಇಸವಿಃ

**ಮೂಲ ದಾವಾ ಸಂಖ್ಯೆ ಃ 234/2018**

ವಾದಿಃಗಳು ಃ 1) ಆಕಾಶ್ ಬಿನ್ ಚಂದ್ರೇಗೌಡ, 19 ವರ್ಷ ವಯಸ್ಸು,

2) ಅಖಿಲ ಬಿನ್ ಚಂದ್ರೇಗೌಡ, 15 ವರ್ಷ ವಯಸ್ಸು,

2ನೇ ವಾದಿಯು ಮೈನರ್ ಆಗಿದ್ದು, ನೆಕ್ಸ್ಟ್ ಫ್ರೆಂಡ್
ಆಗಿ ತಾಯಿ ಶಾರದಮ್ಮ, 40 ವರ್ಷ ವಯಸ್ಸು,
ಹಾಲಿ ವಾಸಿ ಬಂಡಿಲಕ್ಕನಕೊಪ್ಪಲು ಗ್ರಾಮ,
ಹಳೇಬೀಡು ಹೋಬಳಿ, ಬೇಲೂರು ತಾಲ್ಲೂಕು.

(ಶ್ರೀ ಬಿ.ವಿ. ನಟರಾಜು, ವಕೀಲರು ಪ್ರತಿನಿಧಿಸುತ್ತಾರೆ)

- ವಿರುದ್ಧ -

ಪ್ರತಿವಾದಿಃಗಳು ಃ

1. ಚಂದ್ರೇಗೌಡ ಬಿನ್ ಲೇಟ್ ಲಕ್ಕೇಗೌಡ
   ಉಃ ತೀಸೆಗೌಡ, 60 ವರ್ಷ ವಯಸ್ಸು,
2. ಅನಂತೇಗೌಡ ಬಿನ್ ಲೇಟ್ ನೀಲಕಂಠೇಗೌಡ,
   62 ವರ್ಷ ವಯಸ್ಸು,
3. ಕೃಷ್ಣೇಗೌಡ ಬಿನ್ ಲೇಟ್ ಬೀರೇಗೌಡ,
   61 ವರ್ಷ ವಯಸ್ಸು,
4. ಸೋಮೇಗೌಡ ಬಿನ್ ಲೇಟ್ ಚಿಕ್ಕೇಗೌಡ,
   60 ವರ್ಷ ವಯಸ್ಸು,
5. ಚಂದ್ರೇಗೌಡ ಬಿನ್ ಲೇಟ್ ನಿಂಗೇಗೌಡ,
   60 ವರ್ಷ ವಯಸ್ಸು,
6. ರವಿಗೌಡ ಬಿನ್ ಲೇಟ್ ಅಜ್ಜೇಗೌಡ,
   42 ವರ್ಷ ವಯಸ್ಸು,

ಪ್ರತಿವಾದಿಗಳೆಲ್ಲರೂ ಬಂಡಿಲಕ್ಕನಕೊಪ್ಪಲು ಗ್ರಾಮ,
ಹಳೇಬೀಡು ಹೋಬಳಿ, ಬೇಲೂರು ತಾಲ್ಲೂಕು.

(1 ಮತ್ತು 5ನೇ ಪ್ರತಿವಾದಿಯರು ಏಕಪಕ್ಷೀಯ, 2 ರಿಂದ 4 ಹಾಗೂ 6ನೇ ಪ್ರತಿವಾದಿಯರು ಶ್ರೀ ಬಿ.ಎಸ್.ಜಿ. ಸ್ವಾಮಿ, ವಕೀಲರವರ ಮೂಲಕ ಪ್ರತಿನಿಧಿಸಿರುತ್ತಾರೆ.)

ಃಮಧ್ಯಂತರ ಅರ್ಜಿ 3 ಮತ್ತು 4ಕ್ಕೆ ಪಕ್ಷಕಾರರುಃ

ಅರ್ಜಿದಾರರು ಃ ಆಕಾಶ್ ಮತ್ತು ಇನ್ನೊಬ್ಬರು

ವಿರುದ್ಧ

ಎದುರುದಾರರು ಃ ಚಂದ್ರೇಗೌಡ ಮತ್ತು ಇತರರು

*****

ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2ರ ಮಧ್ಯಕಾಲೀನ ಅರ್ಜಿ ಸಂಖ್ಯೆಃ 3 ಮತ್ತು 4ರ ಮೇಲಿನ ಆದೇಶಃ

ವಾದಿಯರು, ಪ್ರತಿವಾದಿಯರ ವಿರುದ್ಧ ಮಧ್ಯಂತರ ಅರ್ಜಿ ಸಂ.3 ನ್ನು ಸಲ್ಲಿಸಿ, ದಾವೆ ತೀರ್ಮಾನವಾಗುವವರೆಗೆ ಪ್ರತಿವಾದಿಗಳು ದಾವಾ ಆಸ್ತಿಗಳನ್ನು ಕ್ರಯ, ಭೋಗ್ಯ, ಆಧಾರ, ಪರಭಾರೆ ಮಾಡದಂತೆ ಹಾಗೂ ಪ್ರತಿವಾದಿಯರ ವಿರುದ್ಧ ಮಧ್ಯಂತರ ಅರ್ಜಿ ಸಂ.4 ನ್ನು ಸಲ್ಲಿಸಿ, ದಾವೆ ತೀರ್ಮಾನವಾಗುವವರೆಗೆ ದಾವಾ 1ನೇ ಆಸ್ತಿಯಲ್ಲಿ ಪ್ರತಿವಾದಿಗಳಾಗಲೀ ಅಥವಾ ಅವರ ಕಡೆಯವರಾಗಲೀ ಕಟ್ಟಡ, ವಗ್ಗೈರೆಗಳನ್ನು ಕಟ್ಟದಂತೆ ಪ್ರತಿವಾದಿಯರ ವಿರುದ್ಧ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶದ ಮೂಲಕ ನಿರ್ಬಂಧಿಸಬೇಕಾಗಿ ಪ್ರಾರ್ಥಿಸಿರುತ್ತಾರೆ.

2. ವಾದಿಯರು ಃ ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಮತ್ತು ವಾದ ಪತ್ರದಲ್ಲಿ ಹೇಳುವುದೇನೆಂದರೆ, 1ನೇ ವಾದಿಯು ವಾದಿಗಳಿಗೆ ತಂದೆಯಾಗಬೇಕು. 2ನೇ ವಾದಿಯನ್ನು ಪ್ರತಿನಿಧಿಸುವ ಶಾರದಮ್ಮ 1ನೇ ಪ್ರತಿವಾದಿಯ ಹೆಂಡತಿಯಾಗಬೇಕು. 2 ರಿಂದ 6ನೇ ಪ್ರತಿವಾದಿಗಳಿಗೂ ಹಾಗೂ ದಾವಾ ಆಸ್ತಿಗಳಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ, ವಾದಿಯ ಅಜ್ಜಿ ನಿಂಗಮ್ಮನು ಮರಣ ಹೊಂದಿರುತ್ತಾರೆ. ವಾದಿಗಳು ಮತ್ತು 1ನೇ ಪ್ರತಿವಾದಿ ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಾಗಿರುತ್ತಾರೆ. ವಾದಿಯರ ತಂದೆ ಚಂದ್ರೇಗೌಡನು ಹಿಂದೂ ಅವಿಭಕ್ತ ಕುಟುಂಬದ ಕರ್ತನಾಗಿರುತ್ತಾರೆ. ದಾವಾ ಅನುಸೂಚಿ ಆಸ್ತಿಗಳು ವಾದಿಯರ ಮತ್ತು ಅವರ ತಂದೆ ಚಂದ್ರೇಗೌಡನಿಗೆ ಸೇರಿದ ಪಿತ್ರಾರ್ಜಿತವಾದ ಆಸ್ತಿಗಳಾಗಿರುತ್ತದೆ. ವಾದಿಗಳಲ್ಲಿ ಮತ್ತು 1ನೇ ಪ್ರತಿವಾದಿಯರ ಒಟ್ಟು ಕುಟುಂಬದಲ್ಲಿ ಈವರೆಗೂ ದಾವಾ ಆಸ್ತಿಗಳಲ್ಲಿ ಹಿಸ್ಸೆ ಮತ್ತು ಪ್ರತ್ಯೇಕ ಸ್ವಾಧೀನಾನವಾಗಿರುವುದಿಲ್ಲ, ವಾದಿಗಳು ಮತ್ತು 1ನೇ ಪ್ರತಿವಾದಿಯು ಈವರೆಗೂ ಒಟ್ಟು ಕುಟುಂಬದಲ್ಲಿ ಇದ್ದುಕೊಂಡು ದಾವಾ ಆಸ್ತಿಗಳನ್ನು ಜಂಟಿ ಹಕ್ಕು ಮತ್ತು ಸ್ವಾಧೀನದಲ್ಲಿ ಅನುಭವಿಸಿಕೊಂಡು ಬರುತ್ತಿರುತ್ತಾರೆ. 1ನೇ ಪ್ರತಿವಾದಿಯು ಮನೆಗೆ ಹಿರಿಯ ಸದಸ್ಯನಾಗಿರುತ್ತಾನೆ ಮತ್ತು ವ್ಯವಸಾಯ ಮಾಡಿಕೊಂಡು ಜೀವನವನ್ನು ಮಾಡುವುದನ್ನು ಬಿಟ್ಟರೆ ಬೇರೆ ಯಾವುದೇ ತಿಳುವಳಿಕೆಯು ಇರುವುದಿಲ್ಲ, ಅವಿದ್ಯಾವಂತನಾಗಿದ್ದು, ದಿನದ ಬಹುಪಾಲು ಮದ್ಯವ್ಯಸನಿಯಾಗಿರುತ್ತಾನೆ. ಒಟ್ಟು ಕುಟುಂಬದ ವರಮಾನವೆಲ್ಲಾ 1ನೇ ಪ್ರತಿವಾದಿಯು

ಪಡೆದುಕೊಳ್ಳುತ್ತಿದ್ದಾರೆ. ಸದರಿ ವರಮಾನವನ್ನು ತನ್ನ ದುಶ್ಚಟಗಳಿಗೆ ವಿನಿಯೋಗಿಸುತ್ತಿರುತ್ತಾನೆ. 1ನೇ ವಾದಿಯು ತಾನು ಪ್ರಾಪ್ತ ವಯಸ್ಕನಾಗಿರುವುದರಿಂದ ಈಗ ದಾವಾ 1ನೇ ಆಸ್ತಿಯಲ್ಲಿ ರಾಸುಗಳಿಗೆ ಹುಲ್ಲುಗಳ ಮೆದೆಗಳನ್ನು ಮಾಡುತ್ತಿರಬೇಕಾದರೆ ಮತ್ತು ಸಣ್ಣದಾಗಿ ಕೊಟ್ಟಿಗೆಯನ್ನು ಮಾಡಲು ಮಣ್ಣು ಕೆಲಸವನ್ನು ಮಾಡಲು ಮುಂದಾದಾಗ 2 ರಿಂದ 6ನೇ ಪ್ರತಿವಾದಿಗಳು ದಾವಾ 1ನೇ ಆಸ್ತಿಯ ಹತ್ತಿರ ಬಂದು, ಸದರಿ ಸ್ವತ್ತು ನಮಗೆ ಕ್ರಯವಾಗಿದೆ, ನಮಗೆ ಸ್ವಾಧೀನ ವಹಿಸಬೇಕೆಂದು ತಗಾದೆ ಮಾಡಿರುತ್ತಾರೆ. 1ನೇ ವಾದಿಯು ಆಶ್ಚರ್ಯಕರವಾಗಿ ದಾವಾ 1ನೇ ಆಸ್ತಿಯ ಪಹಣಿಗಳನ್ನು ಪಡೆದು ಪರಿಶೀಲಿಸಲಾಗಿ 2 ರಿಂದ 5ನೇ ಪ್ರತಿವಾದಿಗಳ ಮತ್ತು ವಾದಿಯರ, ವಾದಿಯರ ತಾಯಿ, ತಂದೆ ಮತ್ತು ಅಜ್ಜಿ ನಿಂಗಮ್ಮನ ಹೆಸರು ನಮೂದಾಗಿರುವುದು ಕಂಡು ಬಂದಿರುತ್ತದೆ. ಅಲ್ಲಿಯವರೆಗೂ 1ನೇ ವಾದಿಗೆ ತಿಳಿದು ಬಂದಿರುವುದಿಲ್ಲ. ಆದರೂ ದಾವಾ 1ನೇ ಆಸ್ತಿಯಲ್ಲಿ 2 ರಿಂದ 6ನೇ ಪ್ರತಿವಾದಿಗಳು ಈವರೆಗೂ ಸ್ವಾಧೀನಕ್ಕೆ ಬರಲು ಬಿಟ್ಟಿರುವುದಿಲ್ಲ.

3. ಹೀಗಿರುವಾಗ ವಾದಿಯರು ಮುಂದುವರೆದು ತನ್ನ ಮಧ್ಯಕಾಲೀನ ಅರ್ಜಿ ಪ್ರಮಾಣ ಪತ್ರಿಕೆಗಳಲ್ಲಿ ಹಾಗೂ ವಾದ ಪತ್ರದಲ್ಲಿ ಹೇಳುವುದೇನೆಂದರೆ ವಾದಿಯರು ಸದರಿ ವಿಷಯದ ಬಗ್ಗೆ 1ನೇ ಪ್ರತಿವಾದಿಯನ್ನು ವಿಚಾರಿಸಲಾಗಿ ತಾನು ಯಾವುದೇ ಕ್ರಯಪತ್ರವನ್ನು ಬರೆಸಿಕೊಟ್ಟಿರುವುದಿಲ್ಲವೆಂದು ಮತ್ತು 6ನೇ ಪ್ರತಿವಾದಿಯು ಇದೇ ನ್ಯಾಯಾಲಯದಲ್ಲಿ ದಾವಾ 1ನೇ ಆಸ್ತಿಯಲ್ಲಿ 0-06 ವಿಸ್ತೀರ್ಣಕ್ಕೆ ಗುಂಟೆಗೆ ಒಂದು ಅಸಲು ದಾವಾ ಸಂಃ 123ಃ2014 ನ್ನು ದಾಖಲಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ 1ನೇ ವಾದಿಯು 2ನೇ ವಾದಿಯನ್ನು ಸಂಪರ್ಕಿಸಿ ವಿಷಯಗಳು ತಿಳಿದಿರುತ್ತಾನೆ. 1ನೇ ಪ್ರತಿವಾದಿ ಮದ್ಯವ್ಯಸನಿಯಾಗಿರುವುದರಿದ ಆತನನ್ನು ಕುಡಿಸಿ, ತಿನ್ನಿಸಿ ಇತರೆ ಪ್ರತಿವಾದಿಗಳು ಹಲವಾರು ಕಾಗದ ಪತ್ರಗಳನ್ನು ಸೃಷ್ಟನೆ ಮಾಡಿಕೊಂಡಿರುತ್ತಾರೆಂದು ಭಾವಿಸಿರುತ್ತಾರೆ. ಸದರಿ ವಿವಾದಿತ ಕಾಗದ ಪತ್ರದ ಮೇಲೆ ರೆವಿನ್ಯೂ ದಾಖಲಾತಿಗಳು 2 ರಿಂದ 5ನೇ ಪ್ರತಿವಾದಿಯರ ಹೆಸರಿಗೆ ಆಗಿರುವುದು ವಾದಿಯರಿಗೆ ಈಗ ಕಂಡು ಬಂದಿರುತ್ತದೆ. ಸದರಿ ವಿವಾದಿತ ಕ್ರಯಪತ್ರಗಳು ಕೇವಲ ಕಾಗದ ಪತ್ರವಾಗಿದ್ದು, ಜಾರಿಗೆ ಬಾರದ ಅಸಿಂಧೂವಾದ ಕಾಗದ ಪತ್ರವಾಗಿರುತ್ತದೆ. ಸದರಿ ವಿವಾದಿತ ಕ್ರಯಪತ್ರಗಳ ಆಧಾರದ ಮೇಲೆ ಆಗಿರುವ ರೆವಿನ್ಯೂ ದಾಖಲಾತಿಗಳು ಅನೂರ್ಜಿತವಾದ ದಾಖಲೆಗಳಾಗಿದ್ದು, ವಾದಿಯರ ದಾವಾ ಆಸ್ತಿಯಲ್ಲಿರುವ ಜಂಟಿ ಹಕ್ಕು ಸ್ವಾಧೀನ, ಹಿತಾಸಕ್ತಿಯನ್ನು ಯಾವಾಗ್ಯೂ ಈಗಲೂ ಬದ್ಧಪಡಿಸುವುದಿಲ್ಲ. 2 ರಿಂದ 6ನೇ ಪ್ರತಿವಾದಿಗಳಿಗೆ ದಾವಾ ಆಸ್ತಿಯಲ್ಲಿ ವಾದಿಯರಿಗೆ ಇರುವ ಜಂಟಿ ಹಕ್ಕು ಸ್ವಾಧೀನದ ಬಗ್ಗೆ ವಿವರಿಸಿದರೂ ಉಡಾಫೆ ಉತ್ತರವನ್ನು ನೀಡಿ, ದಾವಾ ಆಸ್ತಿಗಳನ್ನು ನಮಗೆ ಸ್ವಾಧೀನ ನೀಡಬೇಕೆಂದು ಮತ್ತು ದಾವಾ ಆಸ್ತಿಗಳನ್ನು ಪರಭಾರೆ ಮಾಡುತ್ತೇವೆಂದು ಅಥವಾ ಕಟ್ಟಡ ವಗ್ಯೆರೆಗಳನ್ನು ಕಟ್ಟುತ್ತೇವೆಂದು ಈಗ್ಗೆ 4-5 ದಿನಗಳಿಂದ ಗ್ರಾಮದಲ್ಲಿ ಹೇಳಿಕೊಂಡು ತಿರುಗಾಡುತ್ತಿರುತ್ತಾರೆ. 1ನೇ ಪ್ರತಿವಾದಿಯು ಇತರೆ ಪ್ರತಿವಾದಿಗಳ ಜೊತೆ ಷರೀಕ್ಕಾಗಿ ದಾವಾ ಆಸ್ತಿಗಳನ್ನು ಪರಭಾರೆ ಮಾಡುವುದಾಗಿ ಹೇಳಿರುತ್ತಾರೆ. ಒಂದು ವೇಳೆ ಪ್ರತಿವಾದಿಯರು

ಖಾತಾ ಬಲದ ಮೇಲೆ ದಾವಾ ಆಸ್ತಿಗಳನ್ನು ಪರಭಾರೆ ಮಾಡಿದಲ್ಲಿ ಅಥವಾ ಕೃಷಿ ಭೂಮಿಯಲ್ಲಿ ಅಕ್ರಮವಾಗಿ ಕಟ್ಟಡವನ್ನು ಕಟ್ಟಿದಲ್ಲಿ ವಾದಿಗಳಿಗೆ ಅಪರಿಹಾರವಾದ ಕಷ್ಟ-ನಷ್ಟಗಳು ಉಂಟಾಗಿ, ಅನೇಕ ವ್ಯಾಜ್ಯ ಕಾರಣಗಳು ಉಂಟಾಗುತ್ತದೆ. ಮತ್ತು ದಾವಾ ಆಸ್ತಿಗಳ ಮೂಲ ಸ್ವರೂಪವೇ ಬದಲಾಗುತ್ತದೆ. ಆದ್ದರಿಂದ ವಾದಿಯು ಅನಿವಾರ್ಯವಾಗಿ ಈ ದಾವಾವನ್ನು ದಾಖಲು ಮಾಡಲೇಬೇಕಾದ ಪರಿಸ್ಥಿತಿಯು ಇರುತ್ತದೆ. ಇದರಿಂದ ಸದರಿ ದಾವಾದೊಂದಿಗೆ ವಾದಿಯರು, ಪ್ರತಿವಾದಿಯರ ವಿರುದ್ಧ ಮಧ್ಯಂತರ ಅರ್ಜಿ ಸಂ.3 ನ್ನು ಸಲ್ಲಿಸಿ, ದಾವೆ ತೀರ್ಮಾನವಾಗುವವರೆಗೆ ಪ್ರತಿವಾದಿಗಳು ದಾವಾ ಆಸ್ತಿಗಳನ್ನು ಕ್ರಯ, ಭೋಗ್ಯ, ಆಧಾರ, ಪರಭಾರೆ ಮಾಡದಂತೆ ಹಾಗೂ ಪ್ರತಿವಾದಿಯರ ವಿರುದ್ಧ ಮಧ್ಯಂತರ ಅರ್ಜಿ ಸಂ.4 ನ್ನು ಸಲ್ಲಿಸಿ, ದಾವೆ ತೀರ್ಮಾನವಾಗುವವರೆಗೆ ದಾವಾ 1ನೇ ಆಸ್ತಿಯಲ್ಲಿ ಪ್ರತಿವಾದಿಗಳಾಗಲೀ ಅಥವಾ ಅವರ ಕಡೆಯವರಾಗಲೀ ಕಟ್ಟಡ, ವಗೈರೆಗಳನ್ನು ಕಟ್ಟದಂತೆ ಪ್ರತಿವಾದಿಯರ ವಿರುದ್ಧ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶದ ಮೂಲಕ ನಿರ್ಬಂಧಿಸಬೇಕಾಗಿ ಪ್ರಾರ್ಥಿಸಿರುತ್ತಾರೆ.

4. ದಾವಾ ಸಲ್ಲಿಸಿದ ಬಳಿಕ ನ್ಯಾಯಾಲಯ ಹೊರಡಿಸಿದ ದಾವಾ ನೋಟೀಸ್ ಮತ್ತು ಸಮನ್ಸ್‌ಗೆ ಪ್ರತಿಯಾಗಿ 2 ರಿಂದ 4 ಹಾಗೂ 6ನೇ ಪ್ರತಿವಾದಿಯರು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ವಕಾಲತ್ತು ಸಲ್ಲಿಸಿರುತ್ತಾರೆ. 6ನೇ ಪ್ರತಿವಾದಿಯು ತನ್ನ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಸದರಿ ಲಿಖಿತ ಹೇಳಿಕೆಯನ್ನೇ 2 ರಿಂದ 4ನೇ ಪ್ರತಿವಾದಿಯರು ತಮ್ಮ ಪರವಾಗಿ ಲಿಖಿತ ಹೇಳಿಕೆಯನ್ನಾಗಿ ಅಳವಡಿಸಿಕೊಂಡಿರುತ್ತಾರೆ. ಅಲ್ಲದೇ ಸದರಿ ಲಿಖಿತ ಹೇಳಿಕೆಯನ್ನೆ 2 ರಿಂದ 4 ಹಾಗೂ 6ನೇ ಪ್ರತಿವಾದಿಯು ವಾದಿಯರು ಸಲ್ಲಿಸಿರುವ ಮಧ್ಯಂತರ ಅರ್ಜಿ-3 ಮತ್ತು 4ಕ್ಕೆ ಆಕ್ಷೇಪಣೆಯನ್ನಾಗಿ ತಮ್ಮ ಪರವಾಗಿ ಅಳವಡಿಸಿಕೊಂಡಿರುತ್ತಾರೆ. 1 ಮತ್ತು 5ನೇ ಪ್ರತಿವಾದಿಯರು ನ್ಯಾಯಾಲಯಕ್ಕೆ ಗೈರು ಹಾಜರಾಗಿರುತ್ತಾರೆ. ಆದ್ದರಿಂದ ಅವರ ವಿರುದ್ಧ ಏಕ ಪಕ್ಷೀಯ ತೀರ್ಪು ಘೋಷಣೆಗೆ ಆದೇಶವಾಗಿರುತ್ತದೆ. ಹೀಗಿರುವಾಗ 6ನೇ ಪ್ರತಿವಾದಿಯು ತನ್ನ ಲಿಖಿತ ಹೇಳಿಕೆಯಲ್ಲಿ ವಾದಿಯರು ತಂದಿರುವ ದಾವೆಯು ಕಾನೂನು ಮತ್ತು ವಿದ್ಯಾಮಾನಗಳ ರೀತ್ಯಾ ನಿಲ್ಲತಕ್ಕದ್ದಲ್ಲವೆಂದು ಹೇಳುತ್ತಾ, ವಾದ ಪತ್ರದಲ್ಲಿ ಹಾಗೂ ಮಧ್ಯಂತರ ಅರ್ಜಿ-3 ಮತ್ತು 4ರ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವ ಅಂಶಗಳನ್ನು ಸಂಪೂರ್ಣವಾಗಿ ಅಲ್ಲಗೆಳೆದಿರುತ್ತಾರೆ. 2 ರಿಂದ 6ನೇ ಪ್ರತಿವಾದಿಯರಿಗೂ ಮತ್ತು 1ನೇ ಪ್ರತಿವಾದಿಗೂ ಹಾಗೂ ದಾವಾ ಸ್ವತ್ತುಗಳಿಗೂ ಸಂಬಂಧವಿರುತ್ತದೆ ಹೊರತು ವಾದಿಯರುಗಳು ಚಂದ್ರೇಗೌಡನ ಮಕ್ಕಳಾಗಿರುವುದಿಲ್ಲ, ವಾದಿಯರಿಗೂ ಹಾಗೂ ದಾವಾ ಸ್ವತ್ತುಗಳು ಯಾವುದೇ ಸಂಬಂಧವೇ ಇರುವುದಿಲ್ಲ, ವಾದಿಯರು ಚಂದ್ರೇಗೌಡರ ಕಾನೂನುಬದ್ಧ ವಾರಸುದಾರರು ಆಗಿರುವುದಿಲ್ಲ, ಇದರಿಂದ ದಾವಾ ಸ್ವತ್ತುಗಳನ್ನು ಪ್ರಶ್ನಿಸುವ ಹಕ್ಕು ವಾದಿಯರಿಗೆ ಇರುವುದಿಲ್ಲ, 2 ರಿದ 6ನೇ ಪ್ರತಿವಾದಿಯರಿಗೆ ದಾವಾ ಆಸ್ತಿಗಳಿಗೆ ಕುರಿತಂತೆ ಕ್ರಯವಾಗಿದೆ ಎಂದು ವಾದಿಯರಿಗೆ ತಿಳಿದಿದ್ದರೂ ಸಹ ಕಾನೂನಿಗೆ ವಿರುದ್ಧವಾಗಿ ಈ ದಾವಾ ತಂದಿರುತ್ತಾರೆ. ಯಾರಿಂದ, ಎಷ್ಟು ಹಿಸ್ಸೆ

ಕೋರಿದ್ದರೆಂದು ಸರಿಯಾಗಿ ನಮೂದಿಸಿರುವುದಿಲ್ಲ ಹಾಗೂ ಹಾಲಿ ಉಪ ವಿಭಾಗಾಧಿಕಾರಿಯವರ ನ್ಯಾಯಾಲಯದಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ರೆವಿನ್ಯೂ ನ್ಯಾಯಾಲಯಗಳಲ್ಲಿ ಪ್ರಕರಣಗಳು ಮುಕ್ತಾಯವಾಗಿರುತ್ತದೆ ಮತ್ತು ಬಾಕಿ ಇರುವುದು ತಿಳಿದಿದ್ದರೂ, ಸದರಿ ಸಂಗತಿಗಳನ್ನು ಮರೆಮಾಚಿ ಈ ದಾವಾವನ್ನು ತಂದಿರುತ್ತಾರೆ. ವಾದಿಯರು ಮತ್ತು 1ನೇ ಪ್ರತಿವಾದಿ ಷರೀಕ್ಕಾಗಿ ಈ ದಾವಾವನ್ನು ತಂದಿರುತ್ತಾರೆ. ಕ್ರಯ ನೊಂದಣಿ ಆಗಿದೆ ಎಂದು ತಿಳಿದಿದ್ದರು ಸಹ ವಾದಿಯರು ಕ್ರಯಪತ್ರವನ್ನು ರದ್ದುಮಾಡಲು ಕೇಳಿರುವುದಿಲ್ಲ. ಯಾವ ದಾಖಲೆ ಅನೂರ್ಜಿತ ಮತ್ತು ಯಾಕೆ ಅನೂರ್ಜಿತ ಎಂದು ತಿಳಿಸಿರುವುದಿಲ್ಲ, ಜಂಟಿ ಹಕ್ಕು ಇಲ್ಲದೆ ಇದ್ದರೂ ಹೇಗೆ ಬದ್ಧಪಡಿಸುವುದಿಲ್ಲವೆಂದು ವಾದಿಯರೇ ರುಜುವಾತುಪಡಿಸಬೇಕಾಗಿರುತ್ತದೆ. ಹಕ್ಕು ಇಲ್ಲದೇ ವಾದಿಯರಿಗೆ ಹೇಗೆ ಜಂಟಿ ಹಕ್ಕು ಇದೆ ಎಂದು ವಾದಿಯರುಗಳೇ ರುಜುವಾತುಪಡಿಸಬೇಕಾಗಿರುತ್ತದೆ. ಪ್ರತಿವಾದಿಗೆ ಅಂದರೆ ಆರ್‌ಟಿಸಿಯಲ್ಲಿ ಅನಂತೇಗೌಡನಿಗೆ 0-06 ಗುಂಟೆ, ಕೃಷ್ಣೇಗೌಡನಿಗೆ 0-07 ಗುಂಟೆ, ಸೋಮೇಗೌಡನಿಗೆ 0-06 ಗುಂಟೆ, ನಿಂಗಮ್ಮನಿಗೆ 0-19 ಗುಂಟೆ ಅವರುಗಳ ಹೆಸರಿಗೆ ಖಾತೆ ಆಗಿದೆ ಎಂದು ತಿಳಿದಿದ್ದರೂ ಸಹ ವಾದಿಯರು ಪ್ರತಿವಾದಿಯರಿಗೆ ತೊಂದರೆ, ಕಿರುಕುಳ, ಹಿಂಸೆಯನ್ನು ಕೊಡಲು ದಾವಾ ತಂದಿರುತ್ತಾರೆ. ವಾದಿಯರು ದಾವಾ ಆಸ್ತಿಗೆ ಸಂಬಂಧಿಸಿದಂತೆ ಅಗತ್ಯ ದಾಖಲೆಗಳನ್ನು ಹಾಗೂ ಅಗತ್ಯ ಮಾಹಿತಿಗಳನ್ನು ಸಲ್ಲಿಸದೇ ಈ ದಾವಾ ತಂದು ಅನಾವಶ್ಯಕವಾಗಿ ಪ್ರತಿವಾದಿಯರುಗಳನ್ನು ಪಕ್ಷಗಾರನನ್ನಾಗಿ ಮಾಡಿರುತ್ತಾರೆ. ದಾವಾ ಆಸ್ತಿಗಳ ಚೆಕ್ಕು ಬಂಧಿ ಸಹ ಸರಿ ಇರುವುದಿಲ್ಲ, ಆದ್ದರಿಂದ ವಾದಿಯರು ಪ್ರತಿವಾದಿಗಳ ವಿರುದ್ಧ ತಂದಿರುವ ದಾವಾವನ್ನು ಹಾಗೂ ಅದರೊಂದಿಗೆ ತಂದಿರುವ ಮಧ್ಯಕಾಲೀನ ಅರ್ಜಿ-3 ಮತ್ತು 4ನ್ನು ವಜಾ ಮಾಡಬೇಕಾಗಿ ಕೋರಿರುತ್ತಾರೆ.

5. ವಾದವನ್ನು ಆಲಿಸಲಾಯಿತು.

6. ಅರ್ಜಿ ಮತ್ತು ತಕರಾರುಗಳನ್ನು ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದ್ದೇನೆ ಮತ್ತು ಅರ್ಜಿಯ ಇತ್ಯರ್ಥಕ್ಕಾಗಿ ಈ ಕೆಳಗಿನಂತೆ ಅಂಶಗಳನ್ನು ರೂಪಿಸಿರುತ್ತೇನೆಃ

1. ವಾದಿಯರು, ಪ್ರತಿವಾದಿಯರು ದಾವಾ ಅನುಸೂಚಿ ಆಸ್ತಿಗಳನ್ನು ಬೇರೆಯವರಿಗೆ ಪರಭಾರೆ, ಕ್ರಯ, ಭೋಗ್ಯ, ಆಧಾರ ಮಾಡಲು ಪ್ರಯತ್ನಿಸುತ್ತಿರುತ್ತಾರೆಂದು ಹಾಗೂ ಪ್ರತಿವಾದಿಯರು 1ನೇ ದಾವಾ ಆಸ್ತಿಯಲ್ಲಿ ಕಟ್ಟಡ ವಗೈರೆಗಳನ್ನು ಅಕ್ರಮವಾಗಿ ಕಟ್ಟುತ್ತಿದ್ದಾರೆಂದು ಮೇಲ್ನೋಟಕ್ಕೆ ರುಜುವಾತುಪಡಿಸುವರೆ?
2. ವಾದಿಯರು ಅರ್ಜಿಯಲ್ಲಿ ಕೋರಿರುವಂತೆ ತಮ್ಮ ಪರ ಅನುಕೂಲತೆಯ ಒಲವು ಇದೆ ಎಂಬುದನ್ನು ಸಾಬೀತುಪಡಿಸುವರೆ?
3. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಯರಿಗೆ ತಾತ್ಕಾಲಿಕ ನಿರ್ಬಂಧಕಾಜ್ಞೆ ನೀಡದಿದ್ದರೆ

ತುಂಬಲಾರದ ಹಾನಿ ಅಥವಾ ನಷ್ಟ ಉಂಟಾಗುವ ಸಂಭವವಿದೆಯೇ ಎಂಬುದನ್ನು ರುಜುವಾತುಪಡಿಸುವರೆ?

4. ಏನು ಆದೇಶ?

7. ಈ ಪ್ರಕರಣದ ಕಡತ ಮತ್ತು ವಾದಿಯು ಸಲ್ಲಿಸಿದ ಮಧ್ಯಂತರ ಅರ್ಜಿ-3 ಹಾಗೂ ಪ್ರತಿವಾದಿಯರ ತಕರಾರು ಹಾಗೂ ದಾಖಲೆಯನ್ನು ಪರಿಗಣಿಸಿ ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿರುತ್ತೇನೆಃ

| | | | |
|---|---|---|---|
| ಅಂಶ | - | 1 ರಿಂದ 3 ಃ | ಭಾಗಶಃ ಸಕರಾತ್ಮಕವಾಗಿ |
| ಅಂಶ | - | 4 ಃ | ಅಂತಿಮ ಆದೇಶದಂತೆ |

ಃಕಾರಣಗಳುಃ

8. ಅಂಶ ಸಂಖ್ಯೆಃ1 ರಿಂದ 3ಃ- ಈ ಮೂರೂ ಅಂಶಗಳು ಒಂದಕ್ಕೊಂದು ಸಂಬಂಧಪಟ್ಟಿರುವುದರಿಂದ ಹಾಗೂ ವಿಷಯಗಳ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಅವುಗಳನ್ನು ಒಟ್ಟಿಗೆ ವಿಮರ್ಶೆಗೆ ತೆಗೆದುಕೊಂಡಿರುತ್ತೇನೆಃ-

09. ವಾದಿಯರು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ಸಲ್ಲಿಸಿ, ದಾವಾ ಆಸ್ತಿಗಳಲ್ಲಿ ವಾದಿಯರಿಗೆ ತಲಾ 1ಃ3 ಭಾಗದ ಹಿಸ್ಸೆ ಹಕ್ಕು ಇರುತ್ತದೆಂದು ನಿರ್ಧರಿಸಿ, ಉತ್ತಮ, ಮಧ್ಯಮ ವಿಂಗಡಣೆಯಿಂದ ಪ್ರತ್ಯೇಕ ಸ್ವಾಧೀನವನ್ನು ಹೊಂದುವಂತೆಯೂ, ದಾವಾ ಮುಂದಿನ ಫಸಲು ನಷ್ಟವನ್ನು ವಾದಿಯರು ಪ್ರತಿವಾದಿಯರಿಂದ ಹೊಂದುವಂತೆಯೂ ಹಾಗೂ ದಾವಾ ಆಸ್ತಿಯಲ್ಲಿ ವಾದಿಯರು ಅಂತಿಮವಾಗಿ ಹಿಸ್ಸೆ, ಪ್ರತ್ಯೇಕ ಸ್ವಾಧೀನ ಹೊಂದುವವರೆಗೂ ಪ್ರತಿವಾದಿಗಳಾಗಲೀ ಅಥವಾ ಅವರ ಕಟ್ಟಡ, ವಗೈರೆಗಳನ್ನು ಕಟ್ಟದಂತೆ ಶಾಶ್ವತ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡುವಂತೆಯೂ ಹಾಗೂ 2 ರಿಂದ 6ನೇ ಪ್ರತಿವಾದಿಗಳು ಮಾಡಿಸಿಕೊಂಡಿರುವ ವಿವಾದಿತ ಕ್ರಯಪತ್ರಗಳನ್ನು ರುಜುವಾತು ಮಾಡಿದಲ್ಲಿ ಸದರಿ ಕ್ರಯಪತ್ರಗಳು ವಾದಿಯರ ಹಿತಾಸಕ್ತಿಯನ್ನು ಬದ್ಧಪಡಿಸುವುದಿಲ್ಲವೆಂದು ತೀರ್ಮಾನಿಸಬೇಕಾಗಿಯೂ ಕೋರಿ ಸಲ್ಲಿಸಿರುತ್ತಾರೆ. ಸದರಿ ದಾವಾದೊಂದಿಗೆ ವಾದಿಯರು, ಪ್ರತಿವಾದಿಯರ ವಿರುದ್ಧ ಮಧ್ಯಂತರ ಅರ್ಜಿ ಸಂ.3 ನ್ನು ಸಲ್ಲಿಸಿ, ದಾವೆ ತೀರ್ಮಾನವಾಗುವವರೆಗೆ ಪ್ರತಿವಾದಿಗಳು ದಾವಾ ಆಸ್ತಿಗಳನ್ನು ಕ್ರಯ, ಭೋಗ್ಯ, ಆಧಾರ, ಪರಭಾರೆ ಮಾಡದಂತೆ ಹಾಗೂ ಪ್ರತಿವಾದಿಯರ ವಿರುದ್ಧ ಮಧ್ಯಂತರ ಅರ್ಜಿ ಸಂ.4 ನ್ನು ಸಲ್ಲಿಸಿ, ದಾವೆ ತೀರ್ಮಾನವಾಗುವವರೆಗೆ ದಾವಾ 1ನೇ ಆಸ್ತಿಯಲ್ಲಿ ಪ್ರತಿವಾದಿಗಳಾಗಲೀ ಅಥವಾ ಅವರ ಕಡೆಯವರಾಗಲೀ ಕಟ್ಟಡ, ವಗೈರೆಗಳನ್ನು ಕಟ್ಟದಂತೆ ಪ್ರತಿವಾದಿಯರ ವಿರುದ್ಧ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶದ ಮೂಲಕ ನಿರ್ಬಂಧಿಸಬೇಕಾಗಿ ಪ್ರಾರ್ಥಿಸಿರುತ್ತಾರೆ.

10. ವಾದಿಯರ ಪ್ರಕಾರ ವಾದಿಯರು 1ನೇ ಪ್ರತಿವಾದಿಯ ಮಕ್ಕಳಾಗಿದ್ದು, 2 ರಿಂದ 6ನೇ ಪ್ರತಿವಾದಿಯರಿಗೂ ಮತ್ತು ದಾವಾ ಆಸ್ತಿಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ, ದಾವಾ ಆಸ್ತಿಗಳು ಚಂದ್ರೇಗೌಡನಿಗೆ ಸೇರಿದ ಪಿತ್ರಾರ್ಜಿತವಾದ ಆಸ್ತಿಗಳಾಗಿದ್ದು, ವಾದಿಗಳು ಮತ್ತು 1ನೇ ಪ್ರತಿವಾದಿ ಒಟ್ಟು ಕುಟುಂಬದ ಸದಸ್ಯರಾಗಿದ್ದು, ವಾದಿಗಳಲ್ಲಿ ಮತ್ತು 1ನೇ ಪ್ರತಿವಾದಿಯರ ಒಟ್ಟು ಕುಟುಂಬದಲ್ಲಿ ಈವರೆಗೂ ದಾವಾ ಆಸ್ತಿಗಳಲ್ಲಿ ಹಿಸ್ಸೆ ಮತ್ತು ಪ್ರತ್ಯೇಕ ಸ್ವಾಧೀನಾನವಾಗಿರುವುದಿಲ್ಲ, ವಾದಿಗಳು ಮತ್ತು 1ನೇ ಪ್ರತಿವಾದಿಯು ಈವರೆಗೂ ಒಟ್ಟು ಕುಟುಂಬದಲ್ಲಿ ಇದ್ದುಕೊಂಡು ದಾವಾ ಆಸ್ತಿಗಳನ್ನು ಜಂಟಿ ಹಕ್ಕು ಮತ್ತು ಸ್ವಾಧೀನದಲ್ಲಿ ಅನುಭವಿಸಿಕೊಂಡು ಬರುತ್ತಿರುತ್ತಾರೆ ಎಂದು ತಮ್ಮ ನಿಲುವನ್ನು ತೆಗೆದುಕೊಂಡಿರುತ್ತಾರೆ. 2 ರಿಂದ 4 ಹಾಗೂ 6ನೇ ಪ್ರತಿವಾದಿಯರು ಲಿಖಿತ ಹೇಳಿಕೆಯನ್ನು ಸಲ್ಲಿಸಿ, ವಾದಿಯರು ತಮ್ಮ ದಾವಾದಲ್ಲಿ ಹೇಳಿರುವ ಅಂಶಗಳನ್ನು ಸ್ಪಷ್ಟವಾಗಿ ಅಲ್ಲಗೆಳೆದಿರುತ್ತಾರೆ. 2 ರಿಂದ 4 ಹಾಗೂ 6ನೇ ಪ್ರತಿವಾದಿಯರು ತಮ್ಮ ಲಿಖಿತ ಹೇಳಿಕೆಯಲ್ಲಿ ದಾವಾ 1ನೇ ಆಸ್ತಿಯಲ್ಲಿ 2ನೇ ಪ್ರತಿವಾದಿ 0-06 ಗುಂಟೆ ವಿಸ್ತೀರ್ಣ, 3ನೇ ಪ್ರತಿವಾದಿ 0-07 ಗುಂಟೆ ವಿಸ್ತೀರ್ಣ, 4ನೇ ಪ್ರತಿವಾದಿ 0-06 ಗುಂಟೆ ವಿಸ್ತೀರ್ಣವನ್ನು, 5ನೇ ಪ್ರತಿವಾದಿಯ 0-03 ಗುಂಟೆ ವಿಸ್ತೀರ್ಣವನ್ನು ಹಾಗೂ 6ನೇ ಪ್ರತಿವಾದಿ 0-06 ಗುಂಟೆ ವಿಸ್ತೀರ್ಣವನ್ನು ಕ್ರಯಕ್ಕೆ ಪಡೆದು, ಕ್ರಯಕ್ಕೆ ಪಡೆದಾಗಿನಿಂದಲೂ ಸದರಿ ಆಸ್ತಿಗಳಲ್ಲಿ ಸ್ವಾಧೀನದಲ್ಲಿದ್ದುಕೊಂಡು ಅನುಭವಿಸಿಕೊಂಡು ಬರುತ್ತಿರುವುದಾಗಿ ಸ್ಪಷ್ಟವಾಗಿ ತಮ್ಮ ನಿಲುವನ್ನು ತೆಗೆದುಕೊಂಡಿರುತ್ತಾರೆ. ಆದರೆ ವಾದಿಯರು ತಮ್ಮ ವಾದ ಪತ್ರದಲ್ಲಿ 1ನೇ ಪ್ರತಿವಾದಿಯು ಮದ್ಯವ್ಯಸನಿಯಾಗಿರುವುದರಿಂದ ಸದರಿ ಕ್ರಯಪತ್ರಗಳನ್ನು 2 ರಿಂದ 6ನೇ ಪ್ರತಿವಾದಿಯರು 1ನೇ ಪ್ರತಿವಾದಿಗೆ ಮೋಸ ಮಾಡಿ ಸೃಷ್ಟಿಸಿಕೊಂಡಿರುವುದಾಗಿ ತಮ್ಮ ನಿಲುವನ್ನು ತೆಗೆದುಕೊಂಡಿರುತ್ತಾರೆ.

11. 2 ರಿಂದ 6ನೇ ಪ್ರತಿವಾದಿಯರು ಕ್ರಯಕ್ಕೆ ಪಡೆದಿರುವ ಆಸ್ತಿಗಳಿಗೆ ಸಂಬಂಧಿಸಿದಂತೆ ಈಗಾಗಲೇ ಸದರಿ ಪ್ರತಿವಾದಿಗಳ ಹೆಸರಿಗೆ ಮ್ಯುಟೇಷನ್ ಮತ್ತು ಪಹಣಿ ಸಹ ಆಗಿರುವುದು ವಾದಿಯರು ಹಾಜರುಪಡಿಸಿರುವ ದಾಖಲೆಗಳ ಮೂಲಕ ಸ್ಪಷ್ಟವಾಗಿ ಕಂಡುಬರುತ್ತದೆ. ವಾದಿಯರ ಪ್ರಕಾರ ದಾವಾ ಆಸ್ತಿಗಳಲ್ಲಿ ತಮಗೆ ತಲಾ 1:3 ಭಾಗದ ಹಿಸ್ಸೆ ಇದ್ದು, ಸದರಿ ಆಸ್ತಿಗಳನ್ನು ಪ್ರತಿವಾದಿಗಳು ಮೂರನೇ ವ್ಯಕ್ತಿಗಳಿಗೆ ಪರಭಾರೆ ಮಾಡಲು ಪ್ರಯತ್ನಿಸುತ್ತಿರುವುದಾಗಿ ತಿಳಿಸಿರುತ್ತಾರೆ. ಆದರೆ ಈಗಾಗಲೇ ಹೇಳಿದಂತೆ 2 ರಿಂದ 6ನೇ ಪ್ರತಿವಾದಿಯರ ಹೆಸರನಲ್ಲಿ ಕ್ರಯಪತ್ರ ಆಗಿರುವುದರಿಂದ ಹಾಗೂ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಸದರಿ ಪ್ರತಿವಾದಿಗಳು ಕ್ರಯಕ್ಕೆ ಪಡೆದ ಆಸ್ತಿಗಳನ್ನು ತಮ್ಮ ಇಚ್ಛೆಗೆ ಅನುಗುಣವಾಗಿ ಅನುಭವಿಸಿಕೊಂಡು ಹೋಗಲು ಹಕ್ಕುಳ್ಳವರಾಗಿರುತ್ತಾರೆ. ಅದೇ ರೀತಿ ವಾದಿಯರು ದಾವಾ ಆಸ್ತಿಗಳು ತಮ್ಮ ಪಿತ್ರಾರ್ಜಿತವಾದ ಆಸ್ತಿಗಳು ಎಂದು ಮೇಲ್ನೋಟಕ್ಕೆ ತೋರಿಸಲು ಕೇವಲ ಪಹಣಿಗಳನ್ನು ಮಾತ್ರ ಹಾಜರುಪಡಿಸಿದ್ದು,

ಇತರೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ದಾವಾ ಐಟಂ ನಂ:2ಕ್ಕೆ ಸಂಬಂಧಿಸಿದಂತೆ ಯಾವುದೇ ವಿವಾದ ಇರುವುದಿಲ್ಲ. ಸದರಿ ಆಸ್ತಿ ಮೃತ ನಿಂಗಮ್ಮ ಅಂದರೆ ವಾದಿಯರು ಅಜ್ಜಿಯ ಹೆಸರಿನಲ್ಲಿದ್ದು, ಸದರಿ ನಿಂಗಮ್ಮರವರು ಮೃತಪಟ್ಟಿರುತ್ತಾರೆ. ವಾದಿಯರು ಮತ್ತು 1ನೇ ಪ್ರತಿವಾದಿಯೂ ಸದರಿ ಆಸ್ತಿಯಲ್ಲಿ ಹಿಸ್ಸೆ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ. ದಾವಾ ಐಟಂ ನಂ:1 ರ ಆಸ್ತಿಯನ್ನು 2 ರಿಂದ 6ನೇ ಪ್ರತಿವಾದಿಯರು ಈಗಾಗಲೇ ತಮ್ಮ ಹೆಸರಿಗೆ ಸ್ವಲ್ಪ ಆಸ್ತಿಯನ್ನು ಕ್ರಯಕ್ಕೆ ಪಡೆದು, ಸದರಿ ಆಸ್ತಿಗಳಲ್ಲಿ ಸ್ವಾಧೀನದಲ್ಲಿರುವುದಾಗಿ ವಾದಿಯರು ಹಾಜರುಪಡಿಸಿರುವ ಪಹಣಿಗಳಿಂದ ಸ್ಪಷ್ಟವಾಗಿ ಮೇಲ್ನೋಟಕ್ಕೆ ಕಂಡುಬರುತ್ತದೆ. ಇದರಿಂದ ಪ್ರತಿವಾದಿಯರು ಕ್ರಯಕ್ಕೆ ಪಡೆದಿರುವ ಆಸ್ತಿಗಳ ಮೇಲೆ ವಾದಿಯರಿಗೆ ಮಾರಾಟ ಮಾಡದಂತೆ ನಿರ್ಬಂಧಿಸುವ ಹಕ್ಕು ಇರುವುದಿಲ್ಲ. ಈ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯವು **2019 (2) KCCR 1437** ರ **V. Krishna Char and Others V/s Sundara Murthy and Another** ಪ್ರಕರಣದಲ್ಲಿ ಈಗಾಗಲೇ ಪ್ರತಿವಾದಿಯರ ಹೆಸರಿನಲ್ಲಿ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಕ್ರಯಪತ್ರ ಪಡೆದು, ಮ್ಯುಟೇಷನ್ ಮತ್ತು ಪಹಣಿಗಳು ಅಂಗೀಕೃತವಾಗಿದ್ದಲ್ಲಿ ಸದರಿ ಆಸ್ತಿಗಳನ್ನು ಮಾರಾಟ ಮಾಡದಂತೆ ವಾದಿಯರ ಪರವಾಗಿ ನಿರ್ಬಂಧಕಾಜ್ಞೆಯನ್ನು ನೀಡಲು ಬರುವುದಿಲ್ಲವೆಂದು ಮಾನ್ಯ ಉಚ್ಛ ನ್ಯಾಯಾಲಯ ಈ ಕೆಳಕಂಡ ತೀರ್ಪಿನಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿರುತ್ತದೆ.

**2019(2) KCCR 1437**

**V. Krishna Char and Others**

**V/s**

**Sundarm Murthy and Another**

**CIVIL PROCEDURE CODE, 1908- Order 39 Rules 1 and 2 –Temporary injunction- Suit for partition-Plaintiffs seeking temporary injunction restraining defendants from alienating properties in question as they were ancestral- But not supporting their claim by producing any documents- Trial Court declining to grant relief- Justified – More so when protection under Section 52 of Transfer of Property Act is avaiable to plaintiffs.**

12. ಅದೇ ರೀತಿ 2 ರಿಂದ 6ನೇ ಪ್ರತಿವಾದಿಯರು ಸದರಿ ಆಸ್ತಿಗಳನ್ನು ಮಾರಾಟ ಮಾಡಿದ ಪಕ್ಷದಲ್ಲಿ ವಾದಿಯರಿಗೆ ಸ್ವತ್ತು ಹಸ್ತಾಂತರ ಅಧಿನಿಯಮ ಕಲಂ 52 ರ ಪ್ರಕಾರ ರಕ್ಷಣೆ ಇರುತ್ತದೆ. ಅದೇ ರೀತಿ 2 ರಿಂದ 6ನೇ ಪ್ರತಿವಾದಿಯರ ಹೆಸರಿಗೆ ಆಗಿರುವ ಮ್ಯುಟೇಷನ್‌ನ್ನು ವಾದಿಯರು

ಇಲ್ಲಿಯತನಕ ಸಂಬಂಧಪಟ್ಟ ಪ್ರಾಧಿಕಾರದಲ್ಲಿ ಪ್ರಶ್ನಿಸಿರುವುದಿಲ್ಲ. ಇದರಿಂದ ಯಾರ ಹೆಸರಿಗೆ ಮ್ಯುಟೇಷನ್ ಮತ್ತು ಪಹಣಿ ಅಂಗೀಕೃತವಾಗಿರುತ್ತದೆಯೋ ಅವರು ಸದರಿ ಆಸ್ತಿಯಲ್ಲಿ ಶಾಂತಿಯುತವಾದ ಸ್ವಾಧೀನಾನುಭವದಲ್ಲಿ ಇರುವುದಾಗಿ ಪರಿಗಣಿಸಬಹುದಾಗಿ ಮಾನ್ಯ ಉಚ್ಚ ನ್ಯಾಯಾಲಯ **2015 (4) KCCR 3761** ರ **Pampanagouda V/s Smt. Deepa** ರವರ ಪ್ರಕರಣದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿರುತ್ತಾರೆ.

**2015 (4) KCCR 3761**

**KARNATAKA HIGH COUT**

**Pampanagouda V/s Smt Deepa**

**CIVIL PROCEDURE CODE, 1908- Order 39 Rules 1 and 2 –Temporary injunction- Prima facie case- Unchallenged revenue entries taken as material to show lawful possession.**

ಈ ಪ್ರಕರಣದಲ್ಲಿಯೂ ಸಹ ವಾದಿಯರು 2 ರಿಂದ 6ನೇ ಪ್ರತಿವಾದಿಯರ ಹೆಸರಿಗೆ ಆಗಿರುವ ರೆವಿನ್ಯೂ ದಾಖಲೆಗಳನ್ನು ಇಲ್ಲಿಯತನಕ ಪ್ರಶ್ನಿಸಿರುವುದಿಲ್ಲ.

13. ಅದೇ ರೀತಿ ಮುಂದುವರೆದು ವಾದಿಯರು ಇದೇ ನ್ಯಾಯಾಲಯದಲ್ಲಿ ಸರ್ವೆಯರ್‌ನ್ನು ನೇಮಕ ಮಾಡಿ ವಾದಿಯರು ಮತ್ತು ಪ್ರತಿವಾದಿಯರು ದಾವಾ ಐಟಂ ನಂಬರ್ಃ 1 ಮತ್ತು 2 ರ ಆಸ್ತಿಗಳಲ್ಲಿ ಸ್ವಾಧೀನ ಇರುವುದಾಗಿ ಗುರುತಿಸಲು ಕೋರಿರುತ್ತಾರೆ. ಅದರಂತೆ ಸರ್ವೆಯರ್‌ರವರು ಸ್ಥಳಕ್ಕೆ ಭೇಟಿ ನೀಡಿ, ದಾವಾ ಆಸ್ತಿಗಳನ್ನು ಅಳತೆ ಮಾಡಿ, ದಾವಾ ಆಸ್ತಿಗಳಲ್ಲಿ ವಾದಿಯರು ಮತ್ತು ಪ್ರತಿವಾದಿಯರು ಸ್ವಾಧೀನದಲ್ಲಿರುವ ಪ್ರದೇಶವನ್ನು ನಕ್ಷೆಯ ಮೂಲಕ ಸ್ಪಷ್ಟವಾಗಿ ಗುರುತಿಸಿರುತ್ತಾರೆ. 2 ರಿಂದ 6ನೇ ಪ್ರತಿವಾದಿಯರು ಕ್ರಯಕ್ಕೆ ಪಡೆದಿರುವ ಆಸ್ತಿಗಳಿಗೆ ಸಂಬಂಧಪಟ್ಟಂತೆ ಅವರು ಸ್ವಾಧೀನದಲ್ಲಿರುವ ಬಗ್ಗೆ ಸ್ಪಷ್ಟವಾಗಿ ಸರ್ವೆ ನಕ್ಷೆಯಲ್ಲಿ ತೋರಿಸಿರುತ್ತಾರೆ. ಆದರೆ ವಾದಿಯರ ಪರ ವಕೀಲರು ವಾದ ಮಂಡನೆ ಸಮಯದಲ್ಲಿ 2 ರಿಂದ 6ನೇ ಪ್ರತಿವಾದಿಯರು ತಾವು ಕ್ರಯಕ್ಕೆ ಪಡೆದಿರುವ ಆಸ್ತಿಗಳನ್ನು ಹೊರತು ಪಡಿಸಿ, 1ನೇ ಪ್ರತಿವಾದಿ ಮತ್ತು ವಾದಿಯರ ಜಂಟಿ ಖಾತೆಯಲ್ಲಿ ಇರುವ 103ಃ3 ರಲ್ಲಿ 0-03 ಗುಂಟೆ ಪ್ರದೇಶ ಮತ್ತು 0-19 ಗುಂಟೆ ಪ್ರದೇಶದಲ್ಲಿ ಕಟ್ಟಡಗಳನ್ನು ಕಟ್ಟಲು ಪ್ರಯತ್ನಿಸುತ್ತಿರುವುದಾಗಿ ತಮ್ಮ ವಾದವನ್ನು ಮಂಡಿಸಿರುತ್ತಾರೆ. ಆದರೆ ವಾದಿಯರು 2 ರಿಂದ 6ನೇ ಪ್ರತಿವಾದಿಯರು ಸದರಿ ವಾದಿಯರಿಗೆ ಮತ್ತು 1 ನೇ ಪ್ರತಿವಾದಿಗೆ ಸೇರಿದ ಆಸ್ತಿಗಳಲ್ಲಿ ಕಟ್ಟಡವನ್ನು ಕಟ್ಟುತ್ತಿರುವುದಾಗಿ ತೋರಿಸಲು ಯಾವುದೇ ದಾಖಲೆಗಳನ್ನಾಗಲೀ ಅಥವಾ ಫೋಟೋಗಳನ್ನಾಗಲೀ

ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ಅದೇ ರೀತಿ 2 ರಿಂದ 6ನೇ ಪ್ರತಿವಾದಿಯರ ಪರ ವಕೀಲರು ವಾದ ಮಂಡನೆ ಸಮಯದಲ್ಲಿ ತಾವು ಕ್ರಯಕ್ಕೆ ಪಡೆದ ಆಸ್ತಿಗಳಲ್ಲಿ ಮಾತ್ರ ಹಕ್ಕು ಇರುವುದಾಗಿ ಮತ್ತು ವಾದಿಯರು ಮತ್ತು 1ನೇ ಪ್ರತಿವಾದಿಯ ಹೆಸರಿನಲ್ಲಿ ಇರುವ 0-03 ಗುಂಟೆ ಮತ್ತು 0-19 ಗುಂಟೆ ಪ್ರದೇಶಕ್ಕೆ ಸಂಬಂಧಿಸಿದಂತೆ ತಮ್ಮ ಯಾವುದೇ ಹಸ್ತಕ್ಷೇಪ ಇರುವುದಿಲ್ಲವೆಂದು ತಮ್ಮ ನಿಲುವನ್ನು ತೆಗೆದುಕೊಂಡಿರುತ್ತಾರೆ. ಇದರಿಂದ 2 ರಿಂದ 6ನೇ ಪ್ರತಿವಾದಿಯರು ಕ್ರಯಕ್ಕೆ ಪಡೆದಿರುವ ಆಸ್ತಿಗಳಿಗೆ ಸಂಬಂಧಿಸಿದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ವಾದಿಯರ ಪರವಾಗಿ ಮಂಜೂರು ಮಾಡಲು ಬರುವುದಿಲ್ಲ, ಇದರಿಂದ ವಾದಿಯರು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಈಗಾಗಲೇ 2 ರಿಂದ 6ನೇ ಪ್ರತಿವಾದಿಯರು ದಾವಾ ಐಟಂ ನಂಬರ್ಃ 1ರಲ್ಲಿರುವ ಸ್ವಲ್ಪ ಆಸ್ತಿಗಳನ್ನು ಕ್ರಯಕ್ಕೆ ಪಡೆದು ಸ್ವಾಧೀನದಲ್ಲಿರುವುದಾಗಿ ಮ್ಯುಟೇಷನ್ ಮತ್ತು ಪಹಣಿಗಳಿಂದ ಸ್ಪಷ್ಟವಾಗಿ ಕಂಡುಬರುತ್ತದೆ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸಲು ಕೇವಲ ಪಹಣಿಗಳನ್ನು ಹೊರತು ಪಡಿಸಿ, ಇತರೆ ಯಾವುದೇ ದಾಖಲೆಗಳನ್ನು ವಾದಿಯರು ಹಾಜರುಪಡಿಸಿರುವುದಿಲ್ಲ, ಸದರಿ ಪಹಣಿಗಳ ಪ್ರಕಾರ ದಾವಾ ಐಟಂ ನಂಃ1 ರ ಆಸ್ತಿಯಲ್ಲಿ 1ನೇ ಪ್ರತಿವಾದಿಗೆ 0-03 ಗುಂಟೆ ಪ್ರದೇಶ ಮತ್ತು ವಾದಿಯರು ಮತ್ತು 1ನೇ ಪ್ರತಿವಾದಿಯ ಹೆಸರಿಗೆ ಜಂಟಿಯಾಗಿ 0-19 ಗುಂಟೆ ಪ್ರದೇಶ ಇರುವುದಾಗಿ ಕಂಡುಬರುತ್ತದೆ. ಸದರಿ ಪ್ರದೇಶಕ್ಕೆ ಸಂಬಂಧಿಸಿದಂತೆ 2 ರಿಂದ 6ನೇ ಪ್ರತಿವಾದಿಯರು ಪ್ರವೇಶ ಮಾಡದಂತೆ ಯಾವುದೇ ಕಟ್ಟಡ, ವಗೈರೆಗಳನ್ನು ಕಟ್ಟದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡುವುದರಿಂದ ಉಭಯ ಪಕ್ಷಗಾರರಿಗೂ ನ್ಯಾಯ ಒದಗಿಸಿದಂತೆ ಆಗುತ್ತದೆ. ಇದರಿಂದ ವಾದಿಯರು ತಮ್ಮ ತಂದೆಯ ಹೆಸರಿನಲ್ಲಿರುವ ಹಾಗೂ ವಾದಿಯರು ಮತ್ತು 1ನೇ ಪ್ರತಿವಾದಿಯ ಜಂಟಿ ಹೆಸರಿನಲ್ಲಿ ಇರುವ 0-03 ಗುಂಟೆ ಮತ್ತು 0-19 ಗುಂಟೆ ಪ್ರದೇಶಕ್ಕೆ ಮಾತ್ರ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಪಡೆಯಲು ಅರ್ಹರಾಗಿರುತ್ತಾರೆ. ಇದರಿಂದ ಸದರಿ ಪ್ರದೇಶವನ್ನು ಹೊರತುಪಡಿಸಿ 2 ರಿಂದ 6ನೇ ಪ್ರತಿವಾದಿಯರು ಕ್ರಯಕ್ಕೆ ಪಡೆದಿರುವ ಆಸ್ತಿಗಳಲ್ಲಿ ಮೇಲೆ ವಾದಿಯರು ಯಾವುದೇ ನಿರ್ಬಂಧಕಾಜ್ಞೆಯನ್ನು ಪಡೆಯಲು ಅರ್ಹರಿರುವುದಿಲ್ಲ, ಇದರಿಂದ 1 ರಿಂದ 3 ಅಂಶಗಳನ್ನು "ಭಾಗಶಃ ಸಕಾರಾತ್ಮಕ " ಮತ್ತು "ಭಾಗಶಃ ನಕಾರಾತ್ಮಕ " ವಾಗಿ ಉತ್ತರಿಸುತ್ತೇನೆ.

ಅಂಶ ಸಂಖ್ಯೆಃ4ಃ-

14. ಈ ಮೇಲ್ಕಂಡ ಅಂಶಗಳಲ್ಲಿನ ಕಾರಣಗಳಿಂದ ಈ ಕೆಳಕಂಡಂತೆ ಅಂತಿಮ ಆದೇಶವನ್ನು ಮಾಡಿರುತ್ತೇನೆಃ

ಃಆದೇಶಃ

ವಾದಿಯರು, ಪ್ರತಿವಾದಿಯರ ವಿರುದ್ಧ ಸಲ್ಲಿಸಿದ

ಮಧ್ಯಂತರ ಅರ್ಜಿ -3 ಮತ್ತು 4ನ್ನು ಭಾಗಶಃ ಪುರಸ್ಕರಿಸಿದೆ.

**ದಾವಾ ಐಟಂ ನಂಬರ್‌ಃ1 ರಲ್ಲಿ 1ನೇ ಪ್ರತಿವಾದಿಯ ಜಂಟಿ ಹೆಸರಿನಲ್ಲಿರುವ 0-03 ಗುಂಟೆ ಮತ್ತು 0-19 ಗುಂಟೆ ಪ್ರದೇಶದಲ್ಲಿ ಮತ್ತು ದಾವಾ ಐಟಂ ನಂಬರ್‌ಃ2 ರ ಆಸ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಯರು ದಾವಾ ತೀರ್ಮಾನ ಆಗುವವರೆಗೆ ಕ್ರಯ, ಭೋಗ್ಯ, ಆಧಾರ, ಪರಭಾರೆ ಮಾಡದಂತೆ ಪ್ರತಿವಾದಿಯರ ವಿರುದ್ಧ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡಿ ಆದೇಶಿಸಿದೆ.**

**ಮುಂದುವರೆದು 2 ರಿಂದ 6ನೇ ಪ್ರತಿವಾದಿಯರು ವಾದಿಯರು ಮತ್ತು 1ನೇ ಪ್ರತಿವಾದಿಯರ ಜಂಟಿ ಹೆಸರಿನಲ್ಲಿರುವ ದಾವಾ ಐಟಂ ನಂಬರ್‌ಃ1 ಮತ್ತು 2ರಲ್ಲಿನ 0-03 ಗುಂಟೆ ಮತ್ತು 0-19 ಗುಂಟೆ ಪ್ರದೇಶಕ್ಕೆ ಹಸ್ತಕ್ಷೇಪ ಮಾಡಿ, ಯಾವುದೇ ಕಟ್ಟಡ, ವಗೈರೆಗಳನ್ನು ಕಟ್ಟದಂತೆ ಪ್ರತಿವಾದಿಯರ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡಿ ಆದೇಶಿಸಿದೆ.**

**ಖರ್ಚಿನ ಕುರಿತು ಯಾವುದೇ ಆದೇಶವಿರುವುದಿಲ್ಲ.**

**(ಮೇಲ್ಕಂಡ ಆದೇಶವನ್ನು ಶೀಘ್ರಲಿಪಿಗಾರಳಿಗೆ ಉಕ್ತಲೇಖನವನ್ನು ಕೊಟ್ಟು, ಪರಿಷ್ಕರಿಸಿ, ತಿದ್ದುಪಡಿ ಮಾಡಿ ದಿನಾಂಕಃ 16ನೇ ಮಾರ್ಚ್ 2020 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.)**

**(ನಾಗೇಶ ಸಿ.)**
**ಸಿವಿಲ್ ನ್ಯಾಯಾಧೀಶರು,ಬೇಲೂರು**

ಮಧ್ಯಂತರ ಅರ್ಜಿ 3 ಮತ್ತು 4 ರ ಆದೇಶದ ಭಾಗವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತುಃ

ಃಆದೇಶಃ

ವಾದಿಯರು, ಪ್ರತಿವಾದಿಯರ ವಿರುದ್ಧ ಸಲ್ಲಿಸಿದ ಮಧ್ಯಂತರ ಅರ್ಜಿ -3 ಮತ್ತು 4ನ್ನು ಭಾಗಶಃ ಪುರಸ್ಕರಿಸಿದೆ.

ದಾವಾ ಐಟಂ ನಂಬರ್ಃ1 ರಲ್ಲಿ 1ನೇ ಪ್ರತಿವಾದಿಯ ಜಂಟಿ ಹೆಸರಿನಲ್ಲಿರುವ 0-03 ಗುಂಟೆ ಮತ್ತು 0-19 ಗುಂಟೆ ಪ್ರದೇಶದಲ್ಲಿ ಮತ್ತು ದಾವಾ ಐಟಂ ನಂಬರ್ಃ2 ರ ಆಸ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಯರು ದಾವಾ ತೀರ್ಮಾನ ಆಗುವವರೆಗೆ ಕ್ರಯ, ಭೋಗ್ಯ, ಆಧಾರ, ಪರಭಾರೆ ಮಾಡದಂತೆ ಪ್ರತಿವಾದಿಯರ ವಿರುದ್ಧ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡಿ ಆದೇಶಿಸಿದೆ.

ಮುಂದುವರೆದು 2 ರಿಂದ 6ನೇ ಪ್ರತಿವಾದಿಯರು ವಾದಿಯರು ಮತ್ತು 1ನೇ ಪ್ರತಿವಾದಿಯರ ಜಂಟಿ ಹೆಸರಿನಲ್ಲಿರುವ ದಾವಾ ಐಟಂ ನಂಬರ್ಃ1 ಮತ್ತು 2ರಲ್ಲಿನ 0-03 ಗುಂಟೆ ಮತ್ತು 0-19 ಗುಂಟೆ ಪ್ರದೇಶಕ್ಕೆ ಹಸ್ತಕ್ಷೇಪ ಮಾಡಿ, ಯಾವುದೇ ಕಟ್ಟಡ, ವಗೈರೆಗಳನ್ನು ಕಟ್ಟದಂತೆ ಪ್ರತಿವಾದಿಯರ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡಿ ಆದೇಶಿಸಿದೆ.

ಖರ್ಚಿನ ಕುರಿತು ಯಾವುದೇ ಆದೇಶವಿರುವುದಿಲ್ಲ.

(ನಾಗೇಶ ಪಿ.)
ಸಿವಿಲ್ ನ್ಯಾಯಾಧೀಶರು,ಬೇಲೂರು